


ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶುಕ್ರವಾರ, ನವೆಂಬರ್ 3, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00

# ಭ್ರಷ್ಟಾಚಾರ ನಿಯಂತ್ರಣದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ತರ

## ಎಚ್. ಕುಮಾರ್


ಮಂಗಳೂರು: ಎಂಆರ್‌ಪಿಎಲ್-ಸಹ್ಯಾದ್ರಿ ಇಂಟರ್ ಪ್ರೊಫೆಷನಲ್ ಕಾಲೇಜಿಯೇಟ್ ಚರ್ಚಾ ಸ್ಪರ್ಧೆ ಗುರುವಾರ ಜರಗಿತು.

ಮಂಗಳೂರು, ನ. 2: ಭ್ರಷ್ಟಾಚಾರ ಮುಕ್ತ ಭಾರತ ಸಾಕಾರದಲ್ಲಿ ವಿದ್ಯಾರ್ಥಿ ಸಮುದಾಯ ಮಹತ್ತರ ಪಾತ್ರವನ್ನು ವಹಿಸಬೇಕು ಎಂದು ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಚ್. ಕುಮಾರ್ ಹೇಳಿದರು.

ಎಂಆರ್‌ಪಿಎಲ್ ಹಾಗೂ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಹಯೋಗದೊಂದಿಗೆ ಆಯೋಜಿಸಿದ್ದ ನನ್ನ ದೃಷ್ಟಿ ಭ್ರಷ್ಟಾಚಾರ ಮುಕ್ತ ಭಾರತ ವಿಷಯದಲ್ಲಿ ಎಂಆರ್‌ಪಿಎಲ್-ಸಹ್ಯಾದ್ರಿ ಇಂಟರ್ ಪ್ರೊಫೆಷನಲ್ ಕಾಲೇಜಿಯೇಟ್ ಚರ್ಚಾ ಸ್ಪರ್ಧೆಯ ಸಮಾರೋಪದಲ್ಲಿ ಮುಖ್ಯ ಅತಿಥಿಯಾಗಿ ಭಾಗಹಿಸಿ ಮಾತನಾಡಿದ ಅವರು, ಭ್ರಷ್ಟಾಚಾರ ಬಹುದೊಡ್ಡ ಪಿಡುಗು. ಪಾರದರ್ಶಕತೆ, ವ್ಯವಸ್ಥೆಯಲ್ಲಿ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಜಾಗೃತಿಯಿಂದ ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯ. ವಿದ್ಯಾರ್ಥಿ ಸಮುದಾಯ ಇದರಲ್ಲಿ ಸಕ್ರಿಯ ವಾಗಿ ತೊಡಗಿಸಿಕೊಳ್ಳಬೇಕು ಎಂದರು. ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದವರನ್ನು ಅವರು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಅವರು ಸಹ್ಯಾದ್ರಿ ಇಂಟೆಗ್ರೆಟಿ ಕ್ಲಬ್ ಉದ್ಘಾಟಿಸಿದರು.

ಅತಿಥಿಯಗಿದ್ದ ಎಂಆರ್‌ಪಿಎಲ್ ವಿಜಿಲೆನ್ಸ್ ವಿಭಾಗದ ಮುಖ್ಯಾಧಿಕಾರಿ ರಾಜೀವ್ ಕುಶ್ವಾ ಅವರು ಭ್ರಷ್ಟಾಚಾರ ಎಂದರೆ ಬರೇ ಲಂಚ ಮಾತ್ರವಲ್ಲ, ಕರ್ತವ್ಯದಲ್ಲಿ ವಿಮುಖತೆ, ಲೋಪ ಕೂಡ ಇದರಲ್ಲಿ ಸೇರುತ್ತದೆ. ಲಂಚ ನೀಡುವುದು ಕೂಡ ಭ್ರಷ್ಟಾಚಾರ. ಜೀವನ ಹಾಗೂ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡಾಗ ಪರಿವರ್ತನೆ ಸಾಧ್ಯವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಪ್ರಾಂಶುಪಾಲ ಡಾ| ಉಮೇಶ್ ಎಂ. ಭೂಶಿ ಅವರು ಚರ್ಚಾ ಸ್ಪರ್ಧೆ ಅರ್ಥಪೂರ್ಣವಾಗಿ ಆಯೋಜನೆಗೊಂಡಿದೆ ಎಂದು ಹೇಳಿದರು.

ಚರ್ಚಾ ಸ್ಪರ್ಧೆಯನ್ನು ಎಂಆರ್‌ಪಿಎಲ್‌ನ ಜನರಲ್ ಮ್ಯಾನೇಜರ್ (ವಿಜಿಲೆನ್ಸ್) ಕೆ. ಉಪೇಂದ್ರ ರಾವ್ ಉದ್ಘಾಟಿಸಿದರು. ನಗರದ 18 ಕಾಲೇಜುಗಳ 36 ವಿದ್ಯಾರ್ಥಿಗಳು ಭಾಗವಹಿಸಿದ್ದು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಪ್ರಥಮ, ಕೆಎಂಸಿ ದ್ವಿತೀಯ ಹಾಗೂ ಸೈಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜು ತೃತೀಯ ಪ್ರಶಸ್ತಿ ಪಡೆದುಕೊಂಡಿವೆ. ಅತ್ಯುತ್ತಮ ಚರ್ಚಾಪಟುವಾಗಿ ಸೈಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಚೈತ್ರಾ ಅವರಿಗೆ ಬಹುಮಾನ ನೀಡಲಾಯಿತು. ಮೋಲಿ ಚೌಧುರಿ ಸ್ವಾಗತಿಸಿದರು. ಎಚ್.ವಿ. ಮಂಜುನಾಥ್ ವಂದಿಸಿದರು. ಸುಪ್ರೀತಾ ನಿರೂಪಿಸಿದರು.

ಶುಕ್ರವಾರ, 3 ನವೆಂಬರ್ 2017 | ಪುಟಗಳು: 16+4+8 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 97
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರ
VK
ವಿಜಯ ಕರ್ನಾಟಕ



ಭ್ರಷ್ಟಾಚಾರ ನಿರ್ಮೂಲನೆ ಬಗ್ಗೆ ಮಾತನಾಡುವ ಕಾಂಗ್ರೆಸ್ ಲಾಫಿಂಗ್ ಕ್ಲಬ್‌ನಂತಿದೆ: ಮೋದಿ

ರಾಷ್ಟ್ರೀಯ ಪಿಂಚಣಿ ಯೋಜನೆ ಸೇರ್ಪಡೆ ಕನಿಷ್ಠ ವಯೋಮಿತಿಯನ್ನು 60ರಿಂದ 65ಕ್ಕೇರಿಸಿದ ನಿಯಂತ್ರಣ ಮಂಡಳಿ

ಮಧ್ಯಪ್ರದೇಶ ಅಮೆರಿಕ, ಇಂಗ್ಲೆಂಡ್‌ಗಿಂತಲೂ ಪ್ರಗತಿ ಸಾಧಿಸಿದೆ: ಶಿವರಾಜ್ ಸಿಂಗ್ ಚೌಹಾನ್

# ಭ್ರಷ್ಟಾಚಾರ ನಿಯಂತ್ರಣದಲ್ಲಿ ವಿದ್ಯಾರ್ಥಿಗಳ ಪಾತ್ರ ಮುಖ್ಯ

**ಮಂಗಳೂರು:** ಭ್ರಷ್ಟಾಚಾರ ಎನ್ನುವುದು ಸಮಾಜದಲ್ಲಿ ಆಳವಾಗಿ ಬೇರೂರಿರುವುದರಿಂದ ಅದನ್ನು ನಿಯಂತ್ರಿಸುವಲ್ಲಿ ವಿದ್ಯಾರ್ಥಿಗಳ ಪಾತ್ರ ಬಹಳ ಮುಖ್ಯವಾಗಿದೆ. ಸಮಾಜದಲ್ಲಿ ಬದಲಾವಣೆ ತರುವ ಶಕ್ತಿ ವಿದ್ಯಾರ್ಥಿಗಳಲ್ಲಿ ಮಾತ್ರವಿದೆ ಎಂದು ಎಂಆರ್‌ಪಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಎಚ್. ಕುಮಾರ್ ಹೇಳಿದರು.

ಅವರು ಗುರುವಾರ ನಗರದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಹಾಗೂ ಎಂಆರ್‌ಪಿಎಲ್‌ನ ಸಹಯೋಗದಲ್ಲಿ ಸಹ್ಯಾದ್ರಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾದ ಇಂಟರ್ ಪ್ರೊಫೆಶನಲ್ ಕಾಲೇಜಿಯೇಟ್ ಚರ್ಚಾ ಸ್ಪರ್ಧೆ 2017ರ ಸಮಾರೋಪ ಹಾಗೂ ಸಹ್ಯಾದ್ರಿ ಇಂಟೆಗ್ರೆಟಿ ಕ್ಲಬ್‌ನ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.



ವಿದ್ಯಾರ್ಥಿಗಳು ಭ್ರಷ್ಟಾಚಾರದ ಕುರಿತು ಹೋರಾಟ ನಡೆಸಿದಾಗ ಅವರಿಗೆ ಸಾಕಷ್ಟು ಸವಾಲುಗಳು ಎದುರಾಗುವುದು ಸಾಮಾನ್ಯ ಆದರೆ ಇವುಗಳನ್ನು ಮೆಟ್ಟಿನಿಂತು ಗೆಲ್ಲಬೇಕು. ಪ್ರತಿನಿತ್ಯ ನಾವು ಒಂದಲ್ಲಾ ಒಂದು ರೀತಿಯಲ್ಲಿ ಭ್ರಷ್ಟಾಚಾರಕ್ಕೆ ತುತ್ತಾಗುತ್ತಿರುತ್ತೇವೆ. ಈ ವ್ಯವಸ್ಥೆಯಿಂದ ಹೊರಬರಬೇಕಾಗಿದ್ದರೆ ಏಕಾಏಕಿ ಯಾಗಿ ಯಾವುದೇ ಬದಲಾವಣೆ ಸಾಧ್ಯವಾಗದು ಎಂದರು.

ಕಾರ್ಯಕ್ರಮದಲ್ಲಿ ಅತಿಥಿಯಾಗಿ ಎಂಆರ್‌ಪಿಎಲ್‌ನ ಚೀಫ್ ವಿಜಿಲೆನ್ಸ್ ಅಧಿಕಾರಿ ರಾಜೀವ್ ಕುಶ್ವಾ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಉಮೇಶ್‌ಎಂ. ಭೂಶಿ ವಹಿಸಿದ್ದರು. ಮೋಲಿ ಎಸ್ ಚೌಧರಿ ಸ್ವಾಗತಿಸಿದರು. ಎಚ್.ವಿ. ಮಂಜುನಾಥ್ ವಂದಿಸಿದರು. ಸುಪ್ರೀತಾ ಕಾರ್ಯಕ್ರಮ ನಿರೂಪಿಸಿದರು.

'ನನ್ನ ದೃಷ್ಟಿ-ಭ್ರಷ್ಟಾಚಾರ ಮುಕ್ತ ಭಾರತ' ಎಂಬ ವಿಷಯದಲ್ಲಿ ನಡೆದ ಚರ್ಚಾ ಸ್ಪರ್ಧೆಯಲ್ಲಿ ನಗರದ 18 ಕಾಲೇಜುಗಳ 36 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಬಹುಮಾನವನ್ನು ಸಹ್ಯಾದ್ರಿ ಕಾಲೇಜು ತಂಡ ಪಡೆದರೆ, ದ್ವಿತೀಯ ಸ್ಥಾನವನ್ನು ಕೆಎಂಸಿ ಮಣಿಪಾಲ ತಂಡ ಹಾಗೂ ತೃತೀಯ ಸ್ಥಾನವನ್ನು ಸೈಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜು ತಂಡ ತನ್ನದಾಗಿಸಿಕೊಂಡಿತು. ಇದೇ ವೇಳೆ ಸ್ಪರ್ಧೆಯಲ್ಲಿ ಅತ್ಯುತ್ತಮ ಚರ್ಚಾ ಪಟುವಾಗಿ ಸೈಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಚೈತ್ರಾ ಅವರಿಗೆ ಬಹುಮಾನ ನೀಡಲಾಯಿತು. ಬೆಳಗ್ಗೆ ಆರಂಭಗೊಂಡ ಚರ್ಚಾ ಸ್ಪರ್ಧೆಯ ಉದ್ಘಾಟನಾ ಸಮಾರಂಭದಲ್ಲಿ ಅತಿಥಿಯಾಗಿ ಎಂಆರ್‌ಪಿಎಲ್‌ನ ಜನರಲ್ ಮ್ಯಾನೇಜರ್ ಕೆ. ಉಪೇಂದ್ರ ರಾವ್ ಭಾಗವಹಿಸಿದ್ದರು.

+ ಶುಕ್ರವಾರ, ನವೆಂಬರ್ 3, 2017 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 303 | ಪುಟ 18+4+2 • www.prajavani.net f/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY * Adyar, Mangalore - 7

ಚಂದನವನ ಬಿಟ್ಟೆ ಚಾಂಚಲ್ಯದ ಹರ್ಷಿಕಾ

ಸಾಹಿತ್ಯ ಸಮ್ಮೇಳನ ಪ್ರಚಾರಕ್ಕೆ ಚಾಲನೆ 5

ಹಿಮಾಲಯಕ್ಕೆ ಧಕ್ಕೆ: ಅಮೆರಿಕ ಎಚ್ಚರಿಕೆ 10

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,573 ▼ | 10,423 ▼ | ₹29,372 (ಬೆಂಗಳೂರು) ▼ | ₹39,700 (ಬೆಂಗಳೂರು) ▲ | 64.61 ▲ |

### ಸಹ್ಯಾದ್ರಿ–ಎಂಆರ್‌ಪಿಎಲ್ ಚರ್ಚಾ ಸ್ಪರ್ಧೆಯ ಸಮಾರೋಪ

# ‘ಡಿಜಿಟಲ್ ವ್ಯವಸ್ಥೆಯಿಂದ ಭ್ರಷ್ಟಾಚಾರಕ್ಕೆ ಕಡಿವಾಣ’


ಪ್ರಜಾವಾಣಿ ವಾರ್ತೆ

ಮಂಗಳೂರು: ಡಿಜಿಟಲ್ ವ್ಯವಸ್ಥೆಯಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದಾಗಿದ್ದು, ಸರ್ಕಾರದ ಅನೇಕ ಯೋಜನೆಗಳು ಇದಕ್ಕೆ ಸಾಕ್ಷಿಯಾಗಿವೆ ಎಂದು ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಚ್. ಕುಮಾರ್ ಹೇಳಿದರು.

ಸಹ್ಯಾದ್ರಿ ಕಾಲೇಜಿನ ಇಂಟಗ್ರಿಟಿ ಕ್ಲಬ್ ಸಹಯೋಗದಲ್ಲಿ ಗುರುವಾರ ನಡೆದ ಎಂಆರ್‌ಪಿಎಲ್- ಸಹ್ಯಾದ್ರಿ ಅಂತರ ಉದ್ಯಮಾಡಳಿತ ಕಾಲೇಜು ಚರ್ಚಾ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಭ್ರಷ್ಟಾಚಾರವನ್ನು ನಿವಾರಿಸುವ ನಿಟ್ಟಿನಲ್ಲಿ ತಂತ್ರಜ್ಞಾನಗಳ ಬಳಕೆ ಮಾಡಿಕೊಳ್ಳಬೇಕು. ಈಗಾಗಲೇ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನೇರ ಹಣ ವರ್ಗಾವಣೆಯಂತಹ ಯೋಜನೆಗಳು ಈ ದಿಸೆಯಲ್ಲಿ ಪರಿಣಾಮಕಾರಿಯಾಗಿವೆ ಎಂದರು.

ಸಿಲಿಂಡರ್ ಸಬ್ಸಿಡಿ, ವಿವಿಧ ಯೋಜನೆಗಳ ಫಲಾನುಭವಿಗಳ ಸಬ್ಸಿಡಿಯನ್ನು ನೇರವಾಗಿ ಅವರ ಖಾತೆಗೆ ವರ್ಗಾಯಿಸಲಾಗುತ್ತಿದೆ. ಇದರಿಂದ ದಲ್ಲಾಳಿಗಳ ಹಾವಳಿ ಇಲ್ಲದಂತಾಗಿದ್ದು, ಯಾವ ವ್ಯಕ್ತಿಗೂ ಹಣ ನೀಡುವ ಅವಶ್ಯಕತೆ ಇಲ್ಲ ಎಂದ ಅವರು, ಡಿಜಿಟಲ್ ವ್ಯವಸ್ಥೆಯ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ತರಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.



ಮಂಗಳೂರಿನ ಸಹ್ಯಾದ್ರಿ ಕಾಲೇಜಿನಲ್ಲಿ ಗುರುವಾರ ನಡೆದ ಸಹ್ಯಾದ್ರಿ–ಎಂಆರ್‌ಪಿಎಲ್ ಚರ್ಚಾ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಪ್ರಜಾವಾಣಿ ಚಿತ್ರ

ದೇಶದಾದ್ಯಂತ ಜಾಗೃತ ಸಪ್ತಾಹದ ಮೂಲಕ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲಾಗುತ್ತಿದೆ. ಭ್ರಷ್ಟಾಚಾರ ಎಂಬುದು ಇಂದು ಜೀವನದ ಅಂಗವಾಗಿದೆ. ಇದನ್ನು ನಿವಾರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ತೊಡಗಿಸಿಕೊಳ್ಳಬೇಕು. ಕ್ಲಬ್‌ಗಳ ಮೂಲಕ ಭ್ರಷ್ಟಾಚಾರ ಸೇರಿದಂತೆ ಸಾಮಾಜಿಕ ಪಿಡುಗುಗಳ ವಿರುದ್ಧ ಜಾಗೃತಿ ಮೂಡಿಸಬೇಕು. ದೇಶದಲ್ಲಿ ಬದಲಾವಣೆಗೆ ಕಾಲ ಪಕ್ವವಾಗಿದೆ. ವಿದ್ಯಾರ್ಥಿಗಳು ಬದಲಾವಣೆಯ ರಾಯಭಾರಿಗಳಾಗಬೇಕು ಎಂದು ಹೇಳಿದರು.

ಭಾರತದಲ್ಲಿ ಮಾನವ ಸಂಪನ್ಮೂಲ ಹೇರಳವಾಗಿದೆ. ದೇಶ ಪ್ರಗತಿಯ ಪಥದಲ್ಲಿ ದಾಪುಗಾಲು ಇಡುವ ಎಲ್ಲ ಸಾಧ್ಯತೆಗಳಿವೆ. ಸ್ವಚ್ಛತೆ, ನೈರ್ಮಲ್ಯ, ಶಿಕ್ಷಣ, ಭ್ರಷ್ಟಾಚಾರ ಮುಕ್ತ ವ್ಯವಸ್ಥೆಗಳಿಂದ ದೇಶದಲ್ಲಿ ಬದಲಾವಣೆ ಸಾಧ್ಯವಾಗಲಿದ್ದು, ಇದನ್ನು ವಿದ್ಯಾರ್ಥಿಗಳು ಮಾಡಬೇಕು ಎಂದರು.

ಎಂಆರ್‌ಪಿಎಲ್‌ನ ಮುಖ್ಯ ಜಾಗೃತ ಅಧಿಕಾರಿ ರಾಜೀವ ಕುಶ್ವಾ ಮಾತನಾಡಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಭ್ರಷ್ಟಾಚಾರದ ಕುರಿತು ಅರಿವು ಮೂಡಿಸಲು ಕೇಂದ್ರ ಜಾಗೃತ ಆಯೋಗ ಮುಂದಾಗಿದೆ. ಅದರ ಫಲವಾಗಿ ಎರಡು ವರ್ಷಗಳಿಂದ ಜಾಗೃತ ಸಪ್ತಾಹ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಒಳ್ಳೆಯ ಕಾರ್ಯವನ್ನು ಮಾಡುವ ಮೂಲಕ ದೇಶದ ಪ್ರಗತಿಯಲ್ಲಿ ವಿದ್ಯಾರ್ಥಿಗಳು ಪಾಲುದಾರರಾಗಬೇಕು. ಪ್ರಾಮಾಣಿಕತೆ ಮನಸ್ಸಿನಿಂದ ಬರಬೇಕು. ಆಗ ಮಾತ್ರ ಬದಲಾವಣೆ ತರಲು ಸಾಧ್ಯವಾಗಲಿದೆ ಎಂದು ಪ್ರತಿಪಾದಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಯು.ಎಂ. ಭೂಷಿ ಅಧ್ಯಕ್ಷತೆ ವಹಿಸಿದ್ದರು. ಚರ್ಚಾ ಸ್ಪರ್ಧೆಯಲ್ಲಿ ಸಹ್ಯಾದ್ರಿ ಕಾಲೇಜು ಪ್ರಥಮ, ಕೆಎಂಸಿ ಮಣಿಪಾಲ ದ್ವಿತೀಯ ಹಾಗೂ ವಾಮಂಜೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜು ತೃತೀಯ ಸ್ಥಾನ ಗಳಿಸಿದವು. ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಚೈತ್ರಾ, ಬೆಸ್ಟ್ ಡಿಬೇಟರ್ ಗೌರವಕ್ಕೆ ಪಾತ್ರರಾದರು. ಎಂಆರ್‌ಪಿಎಲ್ ಅಧಿಕಾರಿಗಳು, ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಮುಖ್ಯಾಂಶಗಳು**

- ‘ನನ್ನ ದೃಷ್ಟಿ- ಭ್ರಷ್ಟಾಚಾರ ಮುಕ್ತ ಭಾರತ’ ವಿಷಯವಾಗಿ ಚರ್ಚಾ ಸ್ಪರ್ಧೆ
- 17 ಕಾಲೇಜಿನ ವಿದ್ಯಾರ್ಥಿಗಳು ಭಾಗಿ: ವಿಜೇತರಿಗೆ ನಗದು ಬಹುಮಾನ
- ರಾಷ್ಟ್ರೀಯ ಜಾಗೃತ ಸಪ್ತಾಹದ ಅಂಗವಾಗಿ ನಡೆದ ಕಾರ್ಯಕ್ರಮ

**ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಸರಿಯಾದ ಮಾರ್ಗದಲ್ಲಿ ಮುನ್ನಡೆಯುವವನೇ ನಿಜವಾದ ನಾಯಕನಾಗುತ್ತಾನೆ.**

**ಎಚ್.ಕುಮಾರ್**, ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ



ಫಿಕ್ಸಿಂಗ್ ಕಳಂಕಿತರಿಗೆ ಬಿಸಿಸಿಐ ರಕ್ಷಣೆ: ಶ್ರೀಶಾಂತ್ ಆರೋಪ ▶ 11

ಎಸ್‌ಬಿಐ ಗೃಹ ಸಾಲ ಬಡ್ಡಿ ದರ ಶೇ.8.3ಕ್ಕೆ ಇಳಿಕೆ ▶ 8

ಇಂದು ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳ ಹರತಾಳ ◀ 4

9 ◀ ಗೋಭಕ್ತ ಫೈಜ್ ಖಾನ್‌ರಿಂದ 12000 ಕಿ.ಮೀ ಪಾದಯಾತ್ರೆ

ಮಂಗಳೂರು
ಶುಕ್ರವಾರ
3 ನವೆಂಬರ್ 2017
ಹೇಮಲಂಬಿ ಸಂವತ್ಸರ, ದಕ್ಷಿಣಾಯನ, ಶರದೃತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಅಶ್ವಿನಿ
ಬೆಲೆ ₹ 5.00

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 216, ಪುಟಗಳು 12+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2015-17 Posted at kodialbail


ಅಂತರ್ ವೃತ್ತಿಪರ ಕಾಲೇಜು ಚರ್ಚಾ ಸ್ಪರ್ಧೆ ಸಮಾರೋಪ | ಸಹ್ಯಾದ್ರಿ ಇಂಟೆಗ್ರೇಟಿ ಕ್ಲಬ್ ಉದ್ಘಾಟನೆ

## ಡಿಜಿಟಲ್ ಇಂಡಿಯಾದಿಂದ ಭ್ರಷ್ಟಾಚಾರಕ್ಕೆ ಕಡಿವಾಣ: ಕುಮಾರ್

**ಮಂಗಳೂರು:** ಡಿಜಿಟಲ್ ಇಂಡಿಯಾ, ಜನ್‌ಧನ್ ಯೋಜನೆಗಳಿಂದ ದೇಶದಲ್ಲಿ ಪಾರದರ್ಶಕ ವ್ಯವಸ್ಥೆ ರೂಪುಗೊಂಡು ಭ್ರಷ್ಟಾಚಾರಕ್ಕೆ ಅವಕಾಶ ಕಡಿಮೆಯಾಗಲಿದೆ. ಪಾರದರ್ಶಕತೆ ಮತ್ತು ಜನಜಾಗೃತಿಯಿಂದ ಮಾತ್ರ ಭ್ರಷ್ಟಾಚಾರ ತೊಡೆದು ಹಾಕಲು ಸಾಧ್ಯ. ಈ ನಿಟ್ಟಿನಲ್ಲಿ ಯುವ ವಿದ್ಯಾರ್ಥಿಗಳ ಪಾತ್ರ ಮಹತ್ವವಾದುದು ಎಂದು ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಚ್. ಕುಮಾರ್ ಹೇಳಿದ್ದಾರೆ.

ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಎಂಆರ್‌ಪಿಎಲ್‌ನ ಸಹಯೋಗದಲ್ಲಿ ಸಹ್ಯಾದ್ರಿ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ನಡೆದ ಅಂತರ್ ವೃತ್ತಿಪರ ಕಾಲೇಜು ಚರ್ಚಾ ಸ್ಪರ್ಧೆ 2017ರ ಸಮಾರೋಪ, ಸಹ್ಯಾದ್ರಿ ಇಂಟೆಗ್ರೇಟಿ ಕ್ಲಬ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.



ಅತಿಥಿಯಾಗಿದ್ದ ಎಂಆರ್‌ಪಿಎಲ್‌ನ ಚೀಫ್ ವಿಜಿಲೆನ್ಸ್ ಆಫೀಸರ್ ರಾಜೀವ್ ಕುಶ್ವಾ ಮಾತನಾಡಿ, ಕೇಂದ್ರ ವಿಚಕ್ಷಣಾ ದಳ ಭ್ರಷ್ಟಾಚಾರ ವಿರುದ್ಧದ ಹೋರಾಟದ ಮಾರ್ಗ ಬದಲಿಸಿದೆ.

### ಸುಧಾರಣೆ ಮಾರ್ಗದ ಮೂಲಕ ಭ್ರಷ್ಟಾಚಾರ ನಿಯಂತ್ರಣ

ಪ್ರತಿನಿತ್ಯ ನಾವು ಒಂದಲ್ಲ ಒಂದು ರೀತಿಯಲ್ಲಿ ಭ್ರಷ್ಟಾಚಾರಕ್ಕೆ ತುತ್ತಾಗುತ್ತಿರುತ್ತೇವೆ. ಭ್ರಷ್ಟಾಚಾರವೆಂಬುದು ಸಮಾಜದಲ್ಲಿ ಆಳವಾಗಿ ಬೇರೂರಿದೆ. ಈ ವ್ಯವಸ್ಥೆಯಿಂದ ಹೊರಬರಬೇಕಾಗಿದ್ದರೆ ಏಕಾಏಕಿಯಾಗಿ ಯಾವುದೇ ಬದಲಾವಣೆ ಸಾಧ್ಯವಾಗದು. ಸುಧಾರಣೆಯ ಮಾರ್ಗದ ಮೂಲಕ ಭ್ರಷ್ಟಾಚಾರ ನಿಯಂತ್ರಣ ಮಾಡಬೇಕು.

■ ಎಚ್.ಕುಮಾರ್

ಒಬ್ಬ ಅಧಿಕಾರಿ ಭ್ರಷ್ಟನಾಗಿದ್ದಾನೆ ಅಂದರೆ ಅದಕ್ಕೆ ಆತ ಮಾತ್ರ ಕಾರಣನಲ್ಲ, ವ್ಯವಸ್ಥೆಯೂ ಕಾರಣವಾಗಿರುತ್ತದೆ. ⋙ ಪುಟ 3

### ಬಹುಮಾನ ವಿತರಣೆ

'ನನ್ನ ದೃಷ್ಟಿ- ಭ್ರಷ್ಟಾಚಾರ ಮುಕ್ತ ಭಾರತ' ಎಂಬ ವಿಷಯದಲ್ಲಿ ನಡೆದ ಚರ್ಚಾ ಸ್ಪರ್ಧೆಯಲ್ಲಿ ನಗರದ 18 ಕಾಲೇಜುಗಳ 36 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಮಾರೋಪದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಬಹುಮಾನವನ್ನು ಸಹ್ಯಾದ್ರಿ ಕಾಲೇಜು ತಂಡ, ದ್ವಿತೀಯ ಸ್ಥಾನವನ್ನು ಕೆಎಂಸಿ ಮಣಿಪಾಲ ತಂಡ ಹಾಗೂ ತೃತೀಯ ಸ್ಥಾನವನ್ನು ಸೈಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜು ತಂಡ ಪಡೆದುಕೊಂಡಿತು. ಸ್ಪರ್ಧೆಯಲ್ಲಿ ಅತ್ಯುತ್ತಮ ಚರ್ಚಾ ಪಟುವಾಗಿ ಸೈಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಚೈತ್ರಾ ಅವರಿಗೆ ಬಹುಮಾನ ನೀಡಲಾಯಿತು.

THE NEW
INDIAN EXPRESS
MANGALURU • FRIDAY • NOVEMBER 03, 2017 • ₹5.00 • PAGES 16 • CITY EDITION

CENTRAL LIBRARY



## INDIA SLIPS 21 SLOTS ON WEF GENDER GAP INDEX

**Moves to 108th place on World Economic Forum rankings, mainly due to poor participation of women in economy and low wages**

BEHIND **CHINA AND BANGLADESH**

India's rank (108) puts it behind its neighbours China (100) and Bangladesh (47) as the country has closed only 67% of its gender gap. WEF attributes much of India's decline to a widening of gender gaps in political empowerment as well as healthy life expectancy and basic literacy

**BAD YEAR FOR GLOBAL GENDER PARITY**

- This year, for the first time since WEF began measuring the gender gap, the global divide widened (68% of gap closed)
- At the current rate of progress, the global gender gap will take 100 years to bridge, compared to 83 last year
- In terms of workplace gender divide, it will take 217 years

CHENNAI • MADURAI • VIJAYAWADA • BENGALURU • KOCHI • HYDERABAD • VISAKHAPATNAM • COIMBATORE • KOZHIKODE • THIRUVANANTHAPURAM • BELAGAVI • BHUBANESWAR • SHIVAMOGGA • MANGALURU • TIRUPATI • TIRUCHY • TIRUNELVELI • SAMBALPUR • HUBBALLI • DHARMAPURI • KOTTAYAM • KANNUR • VILLUPURAM • KOLLAM • WARANGAL

# Now, a third panel to act against former VTU V-C

**RASHMI BELUR**
@ Bengaluru

A year after governor Vajubhai Vala communicated to the state government to initiate action against Dr H Maheshappa for alleged wrong-doings, the then vice-chancellor of Visvesvaraya Technological University (VTU), Belagavi, the government has appointed retired high court judge Justice Ashok Hinchageri to frame charges. This is the third committee constituted to conduct inquiry.

When Hans Raj Bharadwaj was governor, he had constituted a committee headed by retired judge Justice Ajit Gunjal to look into the allegations against Maheshappa. However, Justice Gunjal did not continue with the inquiry. The second committee was headed by Justice Keshavanarayana. Interestingly, the expenses of all these committees were borne by VTU.

### MAJOR ALLEGATIONS

Belagavi private contractors' association alleged that ₹4.5 crore was spent to renovate the V-C's residence in Belagavi

**Five LED TVs worth ₹24 lakh and various bathroom fittings costing ₹40l were installed during the renovation. The letter also alleged that veneer panelling had cost ₹50.5 lakh**

Irregularities in appointment of 168 non-teaching staff in violation of government orders.

**Reduction of corpus fund from over ₹500 crore to insignificant levels**

### COMMITTEE'S FINDINGS

**Wasteful expenditure of ₹3.06 crore on defunct e-Vidya online learning system**

Unfruitful expenditure of ₹3.31 crore on water supply scheme

**Loss of interest of ₹1.14 crore from fixed deposits**

Outsourcing of exam management system

**Irregularities in recruiting for 168 teaching posts**

- Irregularities in re-evaluation

In August 2016, Governor Vala had communicated to the state government along with the report of the fact-finding committee headed by Justice Keshavanarayana, which confirmed allegations of irregularities at VTU during Maheshappa's tenure as VC. Following the report, the governor suspended Maheshappa from the post and recommend appropriate action against him.

The government, which had not acted so far, issued an on October 16 appointing Justice Ashok Hinchageri as inquiry officer to frame article of charges based on the report submitted by the Justice Keshavanarayana Committee. The order directs the committee to submit a report within three months and also says that report will be forwarded to the governor for further action. "Once we receive the report, we will send it to the governor. Based on his reply, we will take further action," said an official in the Department of Higher Education.